# ಪ್ರಾರ್ಥನೆಯ ಬಲ



❁ ವ್ಯಾಕುಲಚಿತ್ತದಿಂದ ಭಗವಂತನನ್ನು ಪ್ರಾರ್ಥಿಸು. ವಿವೇಕಕ್ಕಾಗಿ ಆತನಿಗೆ ಪ್ರಾರ್ಥನೆ ಮಾಡಿಕೊ. 'ಭಗವಂತನೊಬ್ಬನೇ ಸತ್ಯ, ಉಳಿದುವೆಲ್ಲ ಅನಿತ್ಯ'— ವಿವೇಕ ಎಂಬುದು ಇದೇನೆ. ನೀರು ಸೋಸುವ ಯಂತ್ರದಿಂದ ನೀರನ್ನು ಶೋಧಿಸಿ ತೆಗೆದುಕೊಳ್ಳಬೇಕು. ಕೊಳೆಯನ್ನು ಹಿಂದೆ ಬಿಟ್ಟು ಶುದ್ಧವಾದ ನೀರು ಈ ಯಂತ್ರದಿಂದ ಹೊರಕ್ಕೆ ಬರುತ್ತದೆ. ವಿವೇಕವೆಂಬ ನೀರು ಸೋಸುವ ಯಂತ್ರವನ್ನು ಈ ಸಂಸಾರ ಸಾಗರದಲ್ಲಿ ಉಪಯೋಗಿಸು. ಮೊದಲು ಆತನ ಸಾಕ್ಷಾತ್ಕಾರವನ್ನು ಪಡೆದು, ಬಳಿಕ ಬೇಕಾದರೆ ಸಂಸಾರದಲ್ಲಿ ಇರು. ಆಗ ಅದು ವಿದ್ಯೆಯ ಸಂಸಾರವಾಗುತ್ತದೆ.

❁ ಸತ್ಯವಚನವೇ ಕಲಿಯುಗದ ತಪಸ್ಸು. ಈ ಯುಗದಲ್ಲಿ ಬೇರೆ ವಿಧದ ತಪಸ್ಸುಗಳನ್ನು ಮಾಡಲು ಬಹಳ ಕಠಿಣ. ಸತ್ಯಾರ್ಥಿಗೆ ಭಗವಂತ ದೊರೆತುಬಿಡುತ್ತಾನೆ. ತುಳಸೀದಾಸ ಹೇಳುತ್ತಾನೆ, 'ಸತ್ಯವಚನ, ಭಗವದಧೀನತೆ, ಪರಸ್ತ್ರೀಯರಲ್ಲಿ ಮಾತೃದರ್ಶನ ಇವು ಮೂರು ಮಹಾ ಸದ್ಗುಣಗಳು. ಇವುಗಳ ಅನುಷ್ಠಾನದಿಂದ ಒಂದು ಪಕ್ಷ ಭಗವಂತನ ಸಾಕ್ಷಾತ್ಕಾರ ದೊರೆಯದೆ ಇದ್ದರೆ ತುಳಸೀದಾಸನನ್ನು ಮಿಥ್ಯಾವಾದಿ ಅಂತ ಕರೆಯಿರಿ.'

❁ ಆತನ ಪಾದಪದ್ಮಗಳಲ್ಲಿ ಭಕ್ತಿ, ಪ್ರೇಮ ಉಂಟಾಗುವಂತೆ ವ್ಯವಹರಿಸುತ್ತಾ ಕಾಲ ಕಳೆಯಿರಿ. ಮತ್ತೆ ಬೇರೆ ಏನು ತಾನೆ ಸಾಧ್ಯ ನಿಮ್ಮ ಕೈಯಲ್ಲಿ? ಶ್ರೀಕೃಷ್ಣ ಮಥುರೆಗೆ ಹೊರಟು ಹೋದ ಮೇಲೆ ಆತನ ದರ್ಶನ ದೊರೆಯದೆ ಹೋದುದರಿಂದ ಯಶೋದೆ ತೀರ ಹುಚ್ಚಿಯಂತೆಯೇ ಆಗಿ ಶ್ರೀಮತಿಯ (ರಾಧೆ) ಹತ್ತಿರಕ್ಕೆ ಹೋದಳು. ಯಶೋದೆಯ ದುಃಖವನ್ನು ನೋಡಿ ಶ್ರೀಮತಿಯು ಆದ್ಯಾಶಕ್ತಿಯ ರೂಪವನ್ನು ಧರಿಸಿ ಆಕೆಗೆ ದರ್ಶನ ಕೊಟ್ಟು, 'ಮಗು, ನನ್ನಿಂದ ಒಂದು ವರವನ್ನು ಬೇಡಿಕೊ' ಅಂತ ಹೇಳಿದಳು. ಯಶೋದೆ ಹೇಳಿದಳು : 'ಹೇ ತಾಯೆ, ನಾನು ಮತ್ತೆ ಬೇರೆ ಯಾವುದಕ್ಕೆ ಪ್ರಾರ್ಥಿಸಲಿ? ಆದರೆ, ನಾನು ಕಾಯಾ ವಾಚಾ ಮನಸಾ ಶ್ರೀಕೃಷ್ಣನ ಸೇವೆಯನ್ನು ಮಾಡುವಂತೆಯೂ, ಆ ಕಣ್ಣುಗಳಿಂದ ಆತನ ಭಕ್ತರ ದರ್ಶನ ಮಾಡುವಂತೆಯೂ, ಎಲ್ಲೆಲ್ಲಿ ಆತ ಕ್ರೀಡಿಸುವನೊ ಅಲ್ಲಿಗೆ ಈ ಪಾದಗಳಿಂದ ನಡೆದು ಹೋಗುವಂತೆಯೂ, ಈ ಕೈಗಳಿಂದ ಆತನ ಮತ್ತು ಆತನ ಭಕ್ತರ ಸೇವೆಯನ್ನು ಮಾಡುವಂತೆಯೂ, ಪ್ರತಿಯೊಂದು ಇಂದ್ರಿಯವೂ ಕೇವಲ ಆತನ ಕೆಲಸದಲ್ಲಿಯೇ ನಿರತವಾಗಿರುವಂತೆಯೂ ಕರುಣಿಸು.'

❁ ಯಾವ ಮಗು ತಂದೆಯ ಕೈಯನ್ನು ಹಿಡಿದು ಗದ್ದೆ ತೆವರಿನ ಮೇಲೆ ನಡೆದು ಹೋಗುತ್ತಿರುವುದೋ ಅದು ಎಚ್ಚರತಪ್ಪಿ ತಂದೆಯ ಕೈ ಬಿಟ್ಟುಬಿಟ್ಟು ಕಾಲುವೆಗೆ ಬೀಳುವ ಸಂಭವವಿರುತ್ತದೆ. ಆದರೆ ತಂದೆಯೇ ಮಗುವಿನ ಕೈಯನ್ನು ಹಿಡಿದುಕೊಂಡಿದ್ದರೆ ಅದು ಎಂದಿಗೂ ಕಾಲುವೆಗೆ ಬೀಳುವ ಹಾಗೇ ಇಲ್ಲ.

❁ ಒಂದರಲ್ಲಿ ದೃಢವಿಶ್ವಾಸವುಳ್ಳವರಾಗಿರಿ — ಸಾಕಾರದಲ್ಲಿ ಇಲ್ಲದಿದ್ದರೆ ನಿರಾಕಾರದಲ್ಲಿ. ಆಗ ಮಾತ್ರ ಭಗವಂತನ ಸಾಕ್ಷಾತ್ಕಾರ ದೊರೆಯುತ್ತದೆ; ಇಲ್ಲದೆ ಇದ್ದರೆ ದೊರೆಯದು. ದೃಢತೆಯೊಂದಿದ್ದರೆ ಸಾಕಾರವಾದಿಗೂ ಭಗವಂತನ ಸಾಕ್ಷಾತ್ಕಾರ ದೊರೆಯುತ್ತದೆ, ನಿರಾಕಾರವಾದಿಗೂ ದೊರೆಯುತ್ತದೆ. ಕಜ್ಜಾಯವನ್ನು ನೆಟ್ಟನೆಟ್ಟಗೆ ಕಡಿದು ತಿನ್ನಿ, ಹೇಗೆ ತಿಂದರೂ ಸಿಹಿಯಾಗಿ ಇರುತ್ತದೆ. ಆದರೆ ದೃಢ ವಿಶ್ವಾಸ ಉಳ್ಳವರಾಗಿರಬೇಕು; ವ್ಯಾಕುಲರಾಗಿ ಆತನನ್ನು ಕರೆಯಬೇಕು.

❁ ಮನಸ್ಸು ಚದುರಿ ಹೋಗಿದೆ — ಸ್ವಲ್ಪ ಭಾಗ ಢಾಕಾಕ್ಕೆ, ಸ್ವಲ್ಪ ಭಾಗ ದೆಹಲಿಗೆ, ಸ್ವಲ್ಪ ಭಾಗ ಕೂಚ್‌ಬಿಹಾರಿಗೆ. ಅಂಥ ಮನಸ್ಸನ್ನು ಈಗ ಒಟ್ಟುಗೂಡಿಸಬೇಕಾಗುತ್ತದೆ. ಒಟ್ಟುಗೂಡಿಸಿ ಒಂದು ವಸ್ತುವಿನ ಮೇಲೆ ಏಕಾಗ್ರಮಾಡಬೇಕಾಗುತ್ತದೆ. ನಿನಗೆ ಹದಿನಾರಾಣೆ ಬೆಲೆಬಾಳುವ ಬಟ್ಟೆ ಬೇಕಾದರೆ ವ್ಯಾಪಾರಿಗೆ ಹದಿನಾರಾಣೆಯನ್ನೇ ಕೊಡಬೇಕಾಗುತ್ತದೆ. ಒಂದು ಸ್ವಲ್ಪ ವಿಘ್ನವೇನಾದರೂ ಇದ್ದರೆ ಯೋಗ ಸಿದ್ಧಿಸುವ ಹಾಗಿಲ್ಲ. ಟೆಲಿಗ್ರಾಫ್ ತಂತಿಯಲ್ಲಿ ಒಂದು ಸ್ವಲ್ಪ ಬಿರುಕು ಇದ್ದರೂ ಸಮಾಚಾರ ಮುಟ್ಟದು.

❁ ನೀನು ಸಂಸಾರದಲ್ಲೇನೊ ಇದ್ದೀಯೆ, ಇದ್ದರೇನು ಭಯ? ಆದರೆ ಮಾತ್ರ ಇಡಿಯ ಕರ್ಮಫಲವನ್ನು ಭಗವಂತನಿಗೆ ಅರ್ಪಿಸಿಬಿಡಬೇಕು. ನೀನು ಮಾತ್ರ ಯಾವ ಫಲವನ್ನೂ ಅಪೇಕ್ಷಿಸಕೂಡದು. ಆದರೆ ಒಂದು ವಿಷಯ, ಭಕ್ತಿಕಾಮನೆ ಕಾಮನೆಗಳ ಗುಂಪಿಗೆ ಸೇರಿದುದಲ್ಲ. ಭಕ್ತಿಕಾಮನೆಯನ್ನು, ಭಕ್ತಿ ಪ್ರಾರ್ಥನೆಯನ್ನು ಮಾಡಬಹುದು.

❁ ಭಗವತಿ ನಿನ್ನ ತಾಯಿ. ಜೋರುಮಾಡಿ ಕೇಳು. ಯಾವುದು ಯಾವುದರ ಅಂಶವೊ ಅದು ಅದರಿಂದ ಆಕರ್ಷಿತವಾಗುತ್ತದೆ. ತಾಯಿಯ ಸತ್ವ ನಮ್ಮಲ್ಲಿ ಇರುವುದರಿಂದ, ಆಕೆಯ ಕಡೆಗೆ ಅಷ್ಟೊಂದು ಸೆಳೆತ. ನಿಜವಾದ ಶೈವ ಶಿವನ ಸತ್ತ್ವವನ್ನು ಪಡೆಯುತ್ತಾನೆ. ವೈಷ್ಣವ ವಿಷ್ಣುವಿನ ಸತ್ತ್ವವನ್ನು ಪಡೆಯುತ್ತಾನೆ.

ಶ್ರೀರಾಮಕೃಷ್ಣ ವಚನವೇದದಿಂದ